**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *17.03.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಯು.ಎಸ್ ರವರಿಂದಃ**

. ನಾನು ದ್ವಿತಿಯ ಪಿಯುಸಿ ಫೇಲ್ ಆಗಿದ್ದೇನೆ. ನಾಯಿ ಸಾಕಾಣಿಕೆ ಕೆಲಸ ಮಾಡುತ್ತೇನೆ. ನಾನು, ನನ್ನ ತಂದೆ, ತಾಯಿ ನಮ್ಮ ಮನೆಯಲ್ಲಿ ವಾಸವಿದ್ದೇವೆ. ನಮ್ಮ ಮನೆ 101 ಗಣಪತಿ ದೇವಸ್ಥಾನದ ಹತ್ತಿರ ಇದೆ ಎಂದರೆ ನಿಜ. ಆ ದೇವಸ್ಥಾನದಿಂದ ಕೆ.ಆರ್.ಪೋಲೀಸ್ ಠಾಣೆ ಹತ್ತಿರದಲ್ಲಿದೆ ಎಂದರೆ ನಿಜ. ನನ್ನ ತಂದೆ ಆಯುರ್ವೇದ ಜಟ್ಟಿ ವೃತ್ತಿಯನ್ನು ಮಾಡುತ್ತಾರೆ. ಅವರು ಮನೆಯಲ್ಲಿಯೇ ತಮ್ಮ ವೃತ್ತಿ ಮಾಡುತ್ತಾರೆ. 2 ನೇ ಅಕ್ಟೋಬರ್ ನಂದು ನನ್ನ ಜನ್ಮ ದಿನಾಂಕ ಇದೆ. ದಿಃ02.10.2020 ರಂದು ನಾನು ನನ್ನ ಜನ್ಮ ದಿನಾಂಕವನ್ನು ಆಚರಣೆ ಮಾಡಿರಲಿಲ್ಲ ಆ ದಿನ ನಾನು ಬೆಂಗಳೂರಿಗೆ ಹೋಗಿದ್ದೆ. ಆ ಕಾಲಕ್ಕೆ ನಾನು ನಾಯಿ ಮರಿ ಕೊಡಲು ಬೆಂಗಳೂರಿಗೆ ಹೋಗಿದ್ದೆ. ದಿಃ03.10.2020 ರಂದು ರಾತ್ರಿ ಬೆಂಗಳೂರಿನಿಂದ ಮೈಸೂರಿಗೆ ಬಂದಿದ್ದೆ. ನಾನು ಇನ್ನೊಂದು ನಾಯಿ ಮರಿಯನ್ನು ತರಬೇಕಾಗಿದ್ದರಿಂದ ದಿಃ02.10.2020 ರಂದು ಬೆಂಗಳೂರಿನಲ್ಲೇ ಉಳಿದುಕೊಂಡಿದ್ದೆ. ದಿಃ03.10.2020 ರಂದು ನನ್ನ ಸ್ನೇಹಿತರು ಯಾರು ನನ್ನ ಮನೆ ಬಳಿ ಬಂದಿಲ್ಲ. ದಿಃ04.10.2020 ರಂದು ನಾನು ಬೆಳಗ್ಗೆಯಿಂದ ಮನೆಯಲ್ಲೇ ಇದ್ದೆ. ಆ ಕಾಲಕ್ಕೆ ಬೆಳಗ್ಗೆಯಿಂದ ಸಂಜೆವರೆಗೆ ನನ್ನ ಸ್ನೇಹಿತರು ಯಾರು ಬಂದು ನನ್ನ ಬರ್ತ್ ಡೇ ಆಚರಣೆ ಮಾಡಿರಲಿಲ್ಲ. ನಾನು ಪ್ರತಿ ವರ್ಷ ಹುಟ್ಟು ಹಬ್ಬ ಆಚರಣೆ ಮಾಡುವುದಿಲ್ಲ. ನಾನು ಮನೆಯಲ್ಲಿಯೇ ನಾಯಿ ಸಾಕಾಣಿಕೆ ಮಾಡುತ್ತೇನೆ. ಘಟನೆ ಕಾಲಕ್ಕೆ ನನ್ನ ಬಳಿ 4 ನಾಯಿ

ಮರಿಗಳು ಇದ್ದವು. ನಾನು ದಿನಾಲೂ ಬೆಳಗ್ಗೆ, ಮದ್ಯಾಹ್ನ ಮತ್ತು ಸಂಜೆ 2 ಗಂಟೆ ನಾಯಿಗಳ ಉಪಚಾರ ಮಾಡುತ್ತೇನೆ.

2. ದಿಃ04.10.2020 ರಂದು ರಾತ್ರಿ 10.30 ಕಿಂತ ಮೊದಲು ನಾನು ಮನೆಯಿಂದ ಹೊರಗೆ ಹೋಗಿರಲಿಲ್ಲ. ಆ ದಿನ ರಾತ್ರಿ 10.30 ರ ವರೆಗೆ ನಾನು ಊಟ ಮಾಡಿರಲಿಲ್ಲ. ಆ ದಿನ 11−11.30 ಕ್ಕೆ ನನ್ನ ಸ್ನೇಹಿತರಾದ ಪವನ್ ಮತ್ತು ರಮೇಶ್ ನನ್ನ ಮನೆಗೆ ಬಂದಿದ್ದರು. ಅವರನ್ನು ಬಿಟ್ಟು ಬೇರೆ ಯಾರು ಬಂದಿರಲಿಲ್ಲ. ಆ ಕಾಲಕ್ಕೆ ಅವರು ನನ್ನೊಂದಿಗೆ ಮಾತನಾಡುತ್ತಾ ಒಂದು ಗಂಟೆ ಕುಳಿತಿದ್ದರು. ಆ ಕಾಲಕ್ಕೆ ನಾನು ಮತ್ತು ನನ್ನ ಸ್ನೇಹಿತರು ಸೇರಿ ಎಂ.ಜಿ.ರಸ್ತೆಯಲ್ಲಿರುವ ಮಾರ್ಕೆಟ್ ಬಳಿ ಟೀ ಕುಡಿಯಲು ಹೋಗಿದ್ದೆವು. ಮಾರ್ಕೆಟ್ entrance ಬಳಿ ರಸ್ತೆ ಬದಿಯ ಟೀ ಅಂಗಡಿಗೆ ಹೋಗಿದ್ದೆವು. ಟೀ ಅಂಗಡಿಯವರು ಸ್ಕೂಟರ್ ನಲ್ಲಿಯೇ ಟೀ ತಂದು ಮಾರುತ್ತಾರೆ. ರಾತ್ರಿಯಾಗಿದ್ದರಿಂದ ಮನೆಯವರೆಗೆ ತೊಂದರೆ ಕೊಡುವುದು ಬೇಡ ಎಂದು ಟೀ ಕುಡಿಯಲು ಹೊರಗಡೆ ಹೋಗಿದ್ದೆವು. 12−12.15 ಕ್ಕೆ ಟೀ ಕುಡಿಯಲು ಹೋಗಿದ್ದೆವು. 15 ನಿಮಿಷದ ವರೆಗೆ ಟೀ ಅಂಗಡಿ ಬಳಿ ಇದ್ದೆವು. ಆ ರಸ್ತೆಯಲ್ಲಿ ರಾತ್ರಿ ವೇಳೆಯಲ್ಲೂ ಸಹ ಆಸ್ಪತ್ರೆಗೆ ಮತ್ತು ಮಾರುಕಟ್ಟೆಗೆ ಜನ ಬರುವುದರಿಂದ ಜನ ಸಂದಣಿ ಮತ್ತು ವಾಹನಗಳು ಇರುತ್ತವೆ ಎಂದರೆ ನಿಜ. ಹಳೆಯ ಜೆ.ಎಸ್.ಎಸ್ ಆಸ್ಪತ್ರೆಯ ಪಕ್ಕದಲ್ಲಿ ಒಂದು ಚೌಲ್ಟ್ರಿ ಇದೆ ಎಂದರೆ ನಿಜ. ರಸ್ತೆಯ ಮಧ್ಯದಲ್ಲಿ ಚಾಮುಂಡೇಶ್ವರಿ ದೇವಸ್ಥಾನ ಇದೆ ಎಂದರೆ ನಿಜ. ಜೆ.ಎಸ್.ಎಸ್ ಆಸ್ಪತ್ರೆಯಿಂದ ಚೌಲ್ಟ್ರಿ ವರೆಗೆ ರಸ್ತೆಯ ಮಧ್ಯದಲ್ಲಿ ಮುಳ್ಳು ತಂತಿ ಮತ್ತು ಶೀಟ್ ಗಳನ್ನು ಹಾಕಿದ್ದಾರೆ ಎಂದರೆ ನಿಜ. ದೇವಸ್ಥಾನದಿಂದ ಬ್ರಿಡ್ಜ್ ವರೆಗೆ ರಸ್ತೆಯ ಮಧ್ಯದಲ್ಲಿ ಕಬ್ಬಿಣದ ಬ್ಯಾರಿಕೇಡ್ ಗಳಿವೆ ಎಂದರೆ ನಿಜ. ದೇವಸ್ಥಾನದ ಎದುರಿಗೆ ಮೆಡಿಕಲ್ ಸ್ಟೋರ್ ಮತ್ತು ಆಟೋ ನಿಲ್ದಾಣ ಇವೆ ಎಂದರೆ ನಿಜ.

ಮಾರುಕಟ್ಟೆ ಕಡೆಯಿಂದ ಬಂದರೆ ಹೊಸ ಜೆ.ಎಸ್.ಎಸ್ ಆಸ್ಪತ್ರೆ ಗಿಂತ *20* ಮೀ ಮುಂಚೆ ಹಂಪ್ಸ್ ಗಳಿವೆ ಎಂದರೆ ನಿಜ. ಆ ಹಂಪ್ಸ್ ಆದ ಸ್ವಲ್ಪ ದೂರದಲ್ಲಿ ಜೆ.ಎಸ್.ಎಸ್ ಆಸ್ಪತ್ರೆ ಗೇಟ್ ಇದೆ ಎಂದರೆ ನಿಜ. ಆ ದಿನ ***12.30*** ಕ್ಕೆ ನಾವು ಟೀ ಅಂಗಡಿಯಿಂದ ಹೊರಟಿದ್ದೆವು.

***3.*** ಆ ದಿನ ನಮ್ಮ ಕಾರನ್ನು ಯಾರು ಮತ್ತು ಯಾವ ಕಾರಣಕ್ಕೆ ತಡೆದಿದ್ದರು ಎಂದು ಗೊತ್ತಿಲ್ಲ. ಆ ದಿನ ನಮ್ಮ ಕಾರು ಸ್ವಲ್ಪ ವೇಗವಾಗಿ ಬಂದಿತ್ತು ಎಂದರೆ ಸಾಮಾನ್ಯ ವೇಗದಲ್ಲಿ ಬಂದಿತ್ತು. ಸಾಮಾನ್ಯ ವೇಗದಲ್ಲಿ ಬಂದಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ *8-10* ಜನ ನಮ್ಮ ಕಾರನ್ನು ನಿಲ್ಲಿಸಿದ್ದರು. ಆ *8-10* ಜನ ಯಾರೆಂದು ನಮಗೆ ಗೊತ್ತಿಲ್ಲ. ಚೌಲ್ಟ್ರಿಯಿಂದ ಜೆ.ಎಸ್.ಎಸ್ ಆಸ್ಪತ್ರೆ ಮೇನ್ ಗೇಟ್ ವರೆಗೆ ಲೈಟ್ ಗಳಿಲ್ಲ ಎಂದರೆ ನಿಜ. ಆ ಸ್ಥಳದಲ್ಲಿ ಒಬ್ಬರ ಮುಖ ಒಬ್ಬರಿಗೆ ಕಾಣುವುದಿಲ್ಲ ಎಂದರೆ ನಿಜ. ಆ ದಿನ ನಾವು ಕಾರಿನಿಂದ ಇಳಿದು ಯಾವ ಕಾರಣಕ್ಕೆ ಕಾರು ನಿಲ್ಲಿಸಿದ್ದೀರಿ ಎಂದು ಕೇಳಿದಾಗ ಅವರು ನಮ್ಮನ್ನು ತಳ್ಳಾಡಿದ್ದರು. ಆ ಕಾಲಕ್ಕೆ ಆಸ್ಪತ್ರೆಗೆ ಜನ ಓಡಾಡುತ್ತಾರೆ ನೀವು ವೇಗವಾಗಿ ಬಂದರೆ ಹೇಗೆ ಎಂದು ಪ್ರಶ್ನೆ ಮಾಡಿದ್ದರು ಎಂದರೆ ನಿಜ. ಆ ಕಾಲಕ್ಕೆ ನಾವು ವೇಗವಾಗಿ ಬಂದಿಲ್ಲ ಎಂದು ಹೇಳಿದ್ದೆವು ಎಂದರೆ ನಿಜ. ಆ ದಿನ ನಾನು ಮತ್ತು ನನ್ನ ಸ್ನೇಹಿತರು ಬರ್ತ್ ಡೇ ಪಾರ್ಟಿ ಮಾಡಲು ಹೊರಗಡೆ ಹೋಗಿದ್ದೆವು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾವು ಮೂರು ಜನ ಮದ್ಯ ಸೇವನೆ ಮಾಡಿದ್ದೆವು ಎಂದರೆ ಸರಿಯಲ್ಲ. ಆ ದಿನ ನಾವು ಹಂಪ್ಸ್ ಅನ್ನು ಎಗರಿಸಿ ಮುಂದಕ್ಕೆ ಹೋದಾಗ ಆಟೋದವರು ಅಡ್ಡ ಬಂದಾಗ ನಮ್ಮ ಕಾರು ಬೇಲಿ ಕಡೆ ಹೋಗಿ ನಿಂತಿತ್ತು ಎಂದರೆ ಸರಿಯಲ್ಲ. ಆ ಕಾಲಕ್ಕೆ ಕಾರಿನಲ್ಲಿದ್ದ ಎಲ್ಲರು ಮುಳ್ಳು ತಂತಿ ಮೇಲೆ ಬಿದಿದ್ದೆವು ಎಂದರೆ ಸರಿಯಲ್ಲ. ಆ ಕಾಲಕ್ಕೆ ನನಗೆ ಮುಳ್ಳು ತಂತಿ ತಾಕಿ ಗಾಯವಾಗಿತ್ತು ಎಂದರೆ ಹೇಗೆ ಆಗಿತ್ತು ಎಂದು ಸರಿಯಾಗಿ ಗೊತ್ತಿಲ್ಲ. ಆ ಕಾಲಕ್ಕೆ ನಾನು ಮದ್ಯದ

ಅಮಲಿನಲ್ಲಿ ಇದುದ್ದರಿಂದ ಗಾಯ ಹೇಗೆ ಆಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾವು ಮದ್ಯ ಸೇವನೆ ಮಾಡಿ ಗಾಡಿ ಓಡಿಸಿದ್ದರಿಂದ ಅಲ್ಲಿದ್ದ ಜನ ನಮ್ಮನ್ನು ಬೈದು ಕಳುಹಿಸಿದ್ದರು ಎಂದರೆ ಸರಿಯಲ್ಲ. ಗಾಡಿ ವೇಗವಾಗಿ ಓಡಿಸಿದ್ದಾರೆ ಎಂದು ನಮಗೆ ಬೈದಿದ್ದರು ಎಂದರೆ ನಿಜ. ಆ ಕಾಲಕ್ಕೆ ನಮ್ಮ ಬಳಿ ಇದ್ದ ಯಾವುದೇ ವಸ್ತುವನ್ನು ಅಲ್ಲಿ ಇದ್ದವರು ತೆಗೆದುಕೊಂಡಿಲ್ಲ ಎಂದರೆ ನನ್ನ ಒಂದು ಚೈನು ಕಳೆದುಹೋಗಿದೆ. ದೂರಿನಲ್ಲಿ ಚೈನು ಕಳೆದ ಬಗ್ಗೆ ನಮೂದು ಇದೆಯೋ ಇಲ್ಲವೊ ಗೊತ್ತಿಲ್ಲ. ಚೈನು ಕಳೆದಿದೆ ಎಂದು ಇದೇ ಮೊದಲಿಗೆ ಹೇಳುತ್ತಿದ್ದೇನೆ ಎಂದರೆ ನಿಜ. ಆ ಕಾಲಕ್ಕೆ ಅಲ್ಲಿ ಸೇರಿದ್ದ *8–10* ಜನ ಯಾರೆಂದು ಈಗ ಗುರುತಿಸಲು ಆಗುವುದಿಲ್ಲ. ಘಟನೆ ಕಾಲಕ್ಕೆ *10* ನಿಮಿಷ ಆ ಸ್ಥಳದಲ್ಲಿ ಇದ್ದೆವು.

*4.* ಜೆ.ಎಸ್.ಎಸ್ ಆಸ್ಪತ್ರೆ ಮುಂಭಾಗದಿಂದ ಕೆ.ಆರ್ ಪೋಲೀಸ್ ಠಾಣೆ ಅಂದಾಜು *100* ಮೀ ದೂರದಲ್ಲಿದೆ ಎಂದರೆ ಇರಬಹುದು. ಪಾತಾಳ ಆಂಜನೆಯನ ದೇವಸ್ಥಾನ ಬಳಿ ಯಾವಾಗಲೂ ಪೊಲೀಸರು ಇರುತ್ತಾರೆ ಎಂದರೆ ನಿಜ. ಚಾಮುಂಡೇಶ್ವರಿ ದೇವಸ್ಥಾನದಿಂದ ಪಾತಾಳ ಆಂಜನೆಯನ ದೇವಸ್ಥಾನ *30* ಅಡಿ ದೂರದಲ್ಲಿದೆ ಎಂದರೆ ನಿಜ. ಆ ದೇವಸ್ಥಾನದಿಂದ ಅಗ್ರಹಾರ ಸರ್ಕಲ್ *100–150* ಅಡಿ ದೂರದಲ್ಲಿದೆ ಎಂದರೆ ನಿಜ. ಅಗ್ರಹಾರ ಸರ್ಕಲ್ ನಲ್ಲೂ ಸಹ ಯಾವಾಗಲೂ ಪೊಲೀಸರು ಇರುತ್ತಾರೆ ಎಂದರೆ ನಿಜ. ಅಗ್ರಹಾರ ಸರ್ಕಲ್ ನಿಂದ ಕೆ.ಆರ್ ಪೋಲೀಸ್ ಠಾಣೆ ಹತ್ತಿರದಲ್ಲಿದೆ ಎಂದರೆ ನಿಜ. ಆ ಘಟನೆ ಬಳಿಕ ನಾವು ಕೂಡಲೇ ಅಲ್ಲಿದ್ದ ಪೊಲೀಸರಿಗೆ ಅಥವಾ ಪೋಲೀಸ್ ಠಾಣೆಗೆ ಘಟನೆ ಬಗ್ಗೆ ತಿಳಿಸಿರಲಿಲ್ಲ. ಆ ಸ್ಥಳ ದಿಂದ ನಮ್ಮ ಮನೆಗಿಂತಲೂ ಪೋಲೀಸ್ ಠಾಣೆ ಹತ್ತಿರದಲ್ಲಿದೆ ಎಂದರೆ ನಿಜ. ಅದೇ ಸ್ಥಳದಲ್ಲಿ ಜಗಳವಾಗಿದ್ದರಿಂದ ನಾವು ಜೆ.ಎಸ್.ಎಸ್ ಆಸ್ಪತ್ರೆಗೆ ಹೋಗಿರಲಿಲ್ಲ. ಸೀತಾರಂಗ ಆಸ್ಪತ್ರೆಗೆ ಕೆ.ಆರ್

ಪೋಲೀಸ್ ಠಾಣೆ ಮುಂದೆಯಿಂದ ಹೋಗಬೇಕು ಎಂದರೆ ನಿಜ. ಸೀತಾರಂಗ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಮನೆಗೆ ಬಂದಿದ್ದೆವು. ಸೀತಾರಂಗ ಆಸ್ಪತ್ರೆಯಲ್ಲಿ ಬಿದ್ದು ಗಾಯಗೊಂಡಿದ್ದೇವೆ ಎಂದೆ ಹೇಳಿದ್ದೆವು. ಸೀತಾರಂಗ ಆಸ್ಪತ್ರೆಯಲ್ಲಿ ದಿನದ *24* ಗಂಟೆಯೂ ವೈದ್ಯರು ಇರುತ್ತಾರೆ ಎಂದರೆ ನಿಜ. ಘಟನೆ ದಿನವೇ ದೂರು ಕೊಡಲು ತೊಂದರೆ ಇರಲಿಲ್ಲ. ಆ ದಿನ ನಮ್ಮ ಮನೆಯಲ್ಲಿ ನನ್ನ ತಂದೆ ತಾಯಿಗಳು ಇದ್ದರು. ಆ ಕಾಲಕ್ಕೆ ನಾನು ನನ್ನ ತಂದೆಗೆ ದೂರು ಕೊಡಲು ಕಳುಹಿಸಿರಲಿಲ್ಲ. ರಾತ್ರಿ ವೇಳೆಯಾಗಿದ್ದರಿಂದ ನನ್ನ ಸ್ನೇಹಿತರಿಗೂ ಸಹ ಪೋನ್ ಮಾಡಿ ಹೇಳಿರಲಿಲ್ಲ. ಮರುದಿನ ಬೆಳಗ್ಗೆ ಭಾನವಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೆ. ಆ ದಿನ ಬೆಳಗ್ಗೆ ದೂರು ಕೊಡಲು ತೊಂದರೆ ಇರಲಿಲ್ಲ. ಪವನ್ ಮತ್ತು ರಮೇಶ ದೂರು ಕೊಟ್ಟಿರಲಿಲ್ಲ.

*5.* ನಿ.ಪಿ–*1* ದೂರನ್ನು ಯಾರು ಬರೆದಿದ್ದರು ಎಂದು ಗೊತ್ತಿಲ್ಲ. ನಿ.ಪಿ–*1* ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಘಟನೆ ಮರುದಿನ ಭಾನವಿ ಆಸ್ಪತ್ರೆಯಿಂದ ಬಂದ ಬಳಿಕ ಅಂಬರೀಷ್ ಮತ್ತು ಸ್ವಾಮಿ ಹೊಡೆದಿದ್ದಾರೆ ಎಂದು ಯಾರೊ ನನಗೆ ಹೇಳಿದ್ದರು ಆದ್ದರಿಂದ ಅವರ ಹೆಸರನ್ನು ಸೇರಿಸಿದ್ದೆ. ಅವರು ಠಾಣೆಯ ಬಳಿಯೇ ನನಗೆ ಹೇಳಿದ್ದರು. ಕೋರ್ಟ್ ಮುಂದೆ ಇರುವ ಆರೋಪಿತರನ್ನು ಕೋರ್ಟ್ ನಲ್ಲಿಯೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ನಿಜ. ನನಗೆ ಆರೋಪಿತರ ಪರಿಚಯ ಇಲ್ಲ ಎಂದರೆ ನಿಜ. ಸೀತಾರಂಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ದೂರಿನ ಆಧಾರದ ಮೇಲೆ ಅಂಬರೀಷ್ ಮತ್ತು ಸ್ವಾಮಿ ನನಗೆ ಹೊಡೆದಿದ್ದಾರೆ ಎಂದು ಹೇಳಿದ್ದೇನೆ ಎಂದರೆ ನಿಜ. ಆ ದಿನ ನಾವು ಮದ್ಯಪಾನ ಮಾಡಿ ವಾಹನ ಓಡಿಸಿದಾಗ ಅಲ್ಲಿ ಸೇರಿದ್ದವರು ಬೈದಿದ್ದರಿಂದ ಪೋಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲೆ ದೂರು ಕೊಡುತ್ತಾರೆ ಎನ್ನುವ ಕಾರಣಕ್ಕೆ ನಾವು ಸುಳ್ಳು

ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ–*2* ರಲ್ಲಿನ ಸಹಿಯನ್ನು ಪೋಲೀಸ್ ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ನಿಜ. ನಿ.ಪಿ–*2* ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಜೆ.ಎಸ್.ಎಸ್ ಆಸ್ಪತ್ರೆಯ ಮುಂಭಾಗ ಆಟೋ ಫ್ರಿ ಪೈಡ್ ಪೊಲೀಸ್ ಕೌಂಟರ್ ಇದೆ ಎಂದರೆ ನಿಜ. ಆ ಘಟನೆ ಕಾಲಕ್ಕೆ ಪೊಲೀಸರು ಆ ಸ್ಥಳಕ್ಕೆ ಬಂದಿರಲಿಲ್ಲ. ಅಲ್ಲಿ ಸೇರಿದ್ದ ಜನರು ಯಾವ ಯಾವ ಬಟ್ಟೆ ಹಾಕಿದ್ದರು ಎಂದು ಹೇಳಲು ಆಗುವುದಿಲ್ಲ. ದೂರು ಕೊಡಲು ಪೋಲೀಸ್ ಠಾಣೆಗೆ ಹೋಗಿದ್ದನ್ನು ಬಿಟ್ಟರೇ ಪುನಃ ಯಾವತ್ತು ನಾನು ಪೋಲೀಸ್ ಠಾಣೆಗೆ ಹೋಗಿಲ್ಲ. ನಂತರ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ ಎಂದರೆ ನಿಜ.

*6.* ಎಂ.ಒ–*1* ಅನ್ನು ಕೋರ್ಟ್ ನಲ್ಲಿಯೇ ಮೊದಲ ಬಾರಿಗೆ ನೇಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಪೋಲೀಸ್ ಠಾಣೆಯಲ್ಲಿ ನೋಡಿದ್ದೇನೆ. ಎಂ.ಒ–*1* ಹೊಸ ರೇಜರ್ ಎಂದರೆ ನಿಜ. ಎಂ.ಒ–*1* ಅನ್ನು ಪೊಲೀಸರಿಗೆ ಯಾರು ಕೊಟ್ಟಿದ್ದರು ಎಂದು ಗೊತ್ತಿಲ್ಲ. ಅದನ್ನು ಪೊಲೀಸರೇ ನನಗೆ ತೋರಿಸಿದ್ದರು ಆದರೆ ಅದು ಯಾರ ಬಳಿ ಇತ್ತು ಎಂದು ಅವರ ಹೆಸರು ಗೊತ್ತಿಲ್ಲ. ಎಂ.ಒ–*1* ಅನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿಲ್ಲ. ಎಂ.ಒ–*1* ಅನ್ನು ಪೋಲೀಸ್ ಠಾಣೆ ಮತ್ತು ಕೋರ್ಟ್ ನಲ್ಲಿ ಬಿಟ್ಟು ಬೇರೆ ಎಲ್ಲಿಯೂ ನೋಡಿಲ್ಲ ಎಂದರೆ ನಿಜ. ಆರೋಪಿತರನ್ನು ಮೊದಲ ಬಾರಿಗೆ ಪೋಲೀಸ್ ಠಾಣೆಯಲ್ಲಿ ನೋಡಿದ್ದೆ. ಆ ದಿನ ನನಗೆ ಯಾರು ಸಹ ಹಲ್ಲೆ ಮಾಡಿಲ್ಲ ಎಂದರೆ ಆ ಟೈಮಲ್ಲಿ ಹೇಗೆ ನಡೆದಿತ್ತು ಎಂದು ಸರಿಯಾಗಿ ಗೊತ್ತಿಲ್ಲ. ನಾನು ಸಾಕಿದ ನಾಯಿಗಳು ನನ್ನ ಮೇಲೆ ಹತ್ತುವುದು ಪರಚುವುದು ಮಾಡುತ್ತವೆ ಎಂದರೆ ನಿಜ. ಅಂತ ಸಮಯದಲ್ಲಿ ಸಹ ನನಗೆ ಗಾಯಗಳಾಗಿವೆ ಎಂದರೆ ನಿಜ. ಆ ದಿನ ನಾವು ಟೀ ಕುಡಿಯಲು

ಹೋಗಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಯಾರು ಹಲ್ಲೆ ಮಾಡಿಲ್ಲವಾದ್ದರಿಂದ ಅದೇ ದಿನ ದೂರು ಕೊಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರೆಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***